ಶ್ರೀ ಎಸ್.ಆರ್. ವಿಶ್ವನಾಥ್ : ಮಾನ್ಯ ಪ್ರತಿ ಪಕ್ಷದವರು ಏಕೆ ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದಾರೆ, ಅಲ್ಲಿ ನಿಂತುಕೊಂಡು ಮಾತನಾಡಬೇಡಿ ಎಂದು ಹೇಳಿ.

13. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವ: (ಗೊಂದಲ)

ಶ್ರೀ ಸಿದ್ದು ಸವದಿ : ಮಾನ್ಯ ಉಪಾಧ್ಯಕ್ಷರೆ, 2011 ಜನವರಿ 6 ರಂದು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ಘನತೆವೆತ್ತ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ.

(ಗೊಂದಲ)

ಶ್ರೀ ಸಿ.ಟಿ. ರವಿ . ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸತಕ್ಕಂಥ ನಿರ್ಣಯಕ್ಕೆ ಗೌರವಾನ್ವಿತ ಸದಸ್ಯರಾದ ಮಾನ್ಯ ಸಿದ್ದು ಸವದಿಯವರು ಸೂಚಿಸಿರುವುದನ್ನು ನಾನು ಅನುಮೋದಿಸುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಮಂಡಿಸಲಾಗಿದೆ.

14. ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚೆ:

ವಿಷಯ : ನಿಯಮ 60ರ ಅಡಿಯಲ್ಲಿ ಮಾನ್ಯ ಸಭಾಧ್ಯಕ್ಷರು ನೀಡಿರುವ ತೀರ್ಪನ್ನು ಪುನರ್ ಪರಿಶೀಲನೆ ಮಾಡುವ ಬಗ್ಗೆ ಮುಂದುವರೆದ ಚರ್ಚೆ.

ಡಾ: ಹೆಚ್.ಸಿ. ಮಹಾದೇವಪ್ಪ: ಮಾನ್ಯ ಉಪಾಧ್ಯಕ್ಷರೆ, ಪಾರ್ಲಿಮೆಂಟಿನಲ್ಲಿ ಕೂಡ ವಿರೋಧ ಪಕ್ಷದವರು ಸದನದ ಬಾವಿಯಲ್ಲಿದ್ದಾಗ ಯಾವ ಕಲಾಪಗಳು ನಡೆಯಲಿಲ್ಲ. ಆದರೆ ಈ ರೀತಿಯ ಸಂಪ್ರದಾಯ ಪ್ರಜಾಪ್ರಭುತ್ವಕ್ಕೆ ಯೋಗ್ಯವಾದುದು ಅಲ್ಲ. When the house is not in order, don't allow any business in this place.

ಉಪಾಧ್ಯಕ್ಷರು: ಮಾನ್ಯ ಪ್ರತಿಪಕ್ಷದ ನಾಯಕರಲ್ಲಿ ನಾನು ವಿನಂತಿಯನ್ನು ಮಾಡುತ್ತೇನೆ. ತಮ್ಮ ಬೇಡಿಕೆಯ ಬಗ್ಗೆ ಮಾನ್ಯ ಸಭಾಧ್ಯಕ್ಷರು ಎರಡೆರಡು ಸಲ ಪರಿಶೀಲನೆ ಮಾಡಿ ಆಗುವುದಿಲ್ಲವೆಂದು ಹೇಳಿದ್ದಾರೆ.